Policy pursued by Revenue Officials in procuring paddy, ragi and jola.

*Q.—206. **Sri B. N. BORANNA GOWDA** (Hassan District—General).—Will the Government be pleased to state:—

(*a*) the number of pallas of paddy, ragi and jola received by Depots or Mills up to the end of February 1951 in the State (Districtwar details to be furnished);

(*b*) the policy pursued by the Revenue Officials in procuring paddy, ragi and jola;

(*c*) whether there is a statement in the Revenue Commissioner's Office showing the quantity of paddy, ragi and jola per acre in respect of every taluk as determined by taking the average for ten years;

(*d*) whether it is true that contrary to this statement, the Revenue Officers are showing larger surpluses and collecting such quantities;

(*e*) whether it has come to their notice that procurement is being made even from raiyats who have no surplus, thereby causing them hardship?

*A.—**The Hon'ble Sri T. MARIAPPA** (Home Minister).—

(*a*) *District*	*Paddy.*	*Ragi.*	*Jola.*
Bangalore ...	6,814	6,090	..
Kolar ...	4,020	3,499	21
Mandya ...	306,238	635	...
Mysore ..	367,617	8,592	3,333
Hassan ...	98,949	2,972	...
Chikmagalur ...	77,767	517	237
Shimoga ...	449,803	5,873	2,498
Chitaldrug ...	4,636	21,338	6,976
Tumkur ...	9,378	6,337	...
Total ...	1,325,222	55,903	13,065

(*b*) Procurement is done by the Officers and staff of the Food Department. The Policy pursued is in accordance with the provisions of the Articles of Food Acquisition (Harvest) Order, 1949.

(*c*) If the Hon'ble Member means the yield, then the answer is in the affirmative.

(*d*) No.

(*e*) Does not arise in view of reply to (*d*).

ಶ್ರೀ ಬಿ. ಎಚ್. ಬೋರಣ್ಣಗೌಡರು.—ತಾವು ನನ್ನ (ಸಿ) ಭಾಗದ ಪ್ರಶ್ನೆಗೆ ಉತ್ತರವಾಗಿ ಉತ್ಪತ್ತಿಯಾಗುವ ಫಸಲಿನ ಪ್ರಮಾಣವನ್ನು ತೋರಿಸತಕ್ಕ ತಖ್ತೆ ರೆವಿನ್ಯೂ ಕಮಿಷನರ ಕಚೇರಿಯಲ್ಲಿದೆಯೆಂದು ತಿಳಿಸಿದ್ದೀರಿ. ಈ ಅಂದಾಜಿನ ಸರಾಸರಿ ಪ್ರಕಾರ ತಾನೆ ತಾವೀಗ ಬೆಳೆಗಳನ್ನು ಅಂದಾಜು ಮಾಡುತ್ತಿರುವುದು?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಈ ಅಂದಾಜು ಎಚ್. ಎಸ್. ಫಾರಂ ಪ್ರಕಾರ ನಿಗದಿ ಮಾಡಲಾಗುತ್ತದೆಂಬ ಅಂಶ ತಮಗೇ ಗೊತ್ತಿದೆ.

ಶ್ರೀ ಬಿ. ಎಚ್. ಬೋರಣ್ಣಗೌಡರು.—ಈ ಹಾರ್ವೆಸ್ಟ್ ಲೆಕ್ಕ ಮತ್ತು ಎಚ್. ಎಸ್. ಫಾರಂಗಳನ್ನು ಬರೆಯತಕ್ಕದ್ದು ಶ್ಯಾನುಭೋಗರ ಕೆಲಸ. ಈಗ 16 ಆಣೆ ಬೆಳೆಯಲ್ಲಿ ಎಷ್ಟು ಬರುತ್ತೆಂಬ ಅಂದಾಜನ್ನು ತೋರಿಸತಕ್ಕ ತಖ್ತೆ ಇದೆಯೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ತಾವು ತಿಳಿಸಿರುವಂತೆ ಈ ಸೀಸನ್ ರಿಪೋರ್ಟ್ ಮತ್ತು ಎಚ್. ಎಸ್. ಲೆಕ್ಕಗಳನ್ನು ತಯಾರಿಸತಕ್ಕವರು ಶ್ಯಾನುಭೋಗರು.

ಶ್ರೀ ಬಿ. ಎಚ್. ಬೋರಣ್ಣಗೌಡರು.—ಪ್ರತಿಯೊಂದು ತಾಲ್ಲೂಕಿನಲ್ಲಿಯೂ ಇಷ್ಟು ಎಕರೆಗೆ ಇಷ್ಟು ಪಲ್ಲ ಬತ್ತ ಬರುತ್ತದೆ ಎಂದು ನಿಗದಿ ಮಾಡುವುದಕ್ಕೆ ತಖ್ತೆ ಇದೆಯೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—Seasonal crop report ಬಂದಿದೆ.

ಶ್ರೀ ಬಿ. ಎಚ್. ಬೋರಣ್ಣಗೌಡರು.—ಅದರ ಮೇಲೆ ತಾನೆ ಎಚ್. ಎಸ್. ಲೆಕ್ಕ ಬರೆಯುವುದು?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—Seasonal crop report ಬರೆಯುವ ಆಧಾರದ ಮೇಲೆ ಅಂದಾಜು ಮಾಡಿ ಕಳುಹಿಸುತ್ತಾರೆ.

ಶ್ರೀ ಬಿ. ಎಚ್. ಬೋರಣ್ಣಗೌಡರು.—Crop report ಅಲ್ಲ ನಾನು ಕೇಳುವುದು. ಸರಾಸರಿ ಹತ್ತು ವರ್ಷಕ್ಕೆ ಇಷ್ಟು ಅಂದಾಜು ಪ್ರಕಾರ ಬರುತ್ತದೆ ಎಂದು ನಿಗದಿ ಮಾಡುವುದಕ್ಕೆ ತಖ್ತೆಯಿದೆಯೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಇದೆ, ಅದರ ಆಧಾರದ ಮೇಲೇ ಅಂದಾಜು ಮಾಡುವುದು.

ಶ್ರೀ ಬಿ. ಎಚ್. ಬೋರಣ್ಣಗೌಡರು.—ಅದರ ಮೇಲೆ ತಾನೆ ಇಷ್ಟು ಎಕರೆ ಬೆಳೆಯಾಗಿದೆಯೆಂದು ಏರಿಸುವುದು?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಇಲ್ಲ ಸರಾಸರಿ ಮೇಲೆ ನಿಗದಿ ಮಾಡುವುದಕ್ಕಾಗುವುದಿಲ್ಲ. ಚೆನ್ನಾಗಿ ಬೆಳೆ ಆಗಿದೆಯೆ, ಇಲ್ಲವೆ ಎಂದು ನೋಡಿ ಬರೆಯಬೇಕು.

ಶ್ರೀ ಬಿ. ಎಚ್. ಬೋರಣ್ಣಗೌಡರು.—16ನೆಯ ಸರ್ವೆ ನಂಬರಿನಲ್ಲಿ ಇಷ್ಟು ಬೆಳೆ ಬರುತ್ತದೆಂದು ಹೇಳುವುದಕ್ಕೆ ತಖ್ತೆಯಿದೆಯೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—Seasonal crop report ಇದೆ.

ಶ್ರೀ ಬಿ. ಎಚ್. ಬೋರಣ್ಣಗೌಡರು.—ಅದರ ಮೇಲೆ ತಾನೆ ಎಚ್. ಎಸ್. ಡಿಮ್ಯಾಂಡ್ ಬರೆಯುವುದು? ಇಂಥ ಸರ್ವೆ ನಂಬರಿನಲ್ಲಿ ಇಷ್ಟು ಬೆಳೆಯಾಗುತ್ತದೆ ಎಂದು ಹೇಳಲು ಅದೇ ಆಧಾರ ತಾನೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—Seasonal crop report ಆಧಾರದ ಮೇಲೆ ಎಚ್. ಎಸ್. ಲೆಕ್ಕ ಮಾಡುವುದಕ್ಕೆ ಸಾಧ್ಯವಿಲ್ಲ. ನ್ಥಳಕ್ಕೆ ಪಂಚಾಯಿತಿದಾರರನ್ನು ಕರೆದುಕೊಂಡು ಹೋಗಿ ಬರೆಯಬೇಕೆಂದು ತಿಳಿಸಿದೆ.

ಶ್ರೀ ಬಿ. ಎಚ್. ಬೋರಣ್ಣಗೌಡರು.—ಜಮೀನು ಬಳಿಗೆ ಹೋಗಿ ಎಚ್. ಎಸ್. ಬರೆಯದೆ ಎಲ್ಲೋ ಕೂತು ಕೊಂಡು ಬರೆಯುವುದರಿಂದ ರೈತರಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಹಾಗೆ ಮಾಡಿದರೆ ಅದು ತಪ್ಪು. ಉದಾಹರಣೆ ಹೇಳಿದರೆ ವಿಚಾರ ಮಾಡುತ್ತೇವೆ.

ಶ್ರೀ ಬಿ. ಎಚ್. ಬೋರಣ್ಣಗೌಡರು.—ಅಂಥ ಸಂದರ್ಭಗಳು ತಮ್ಮ ಗಮನಕ್ಕೆ ಬಂದಿಲ್ಲವೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಕೆಲವುಕಡೆ ಬಂದಿದೆ. ಅದನ್ನು ಸರಿಪಡಿಸಿದೆ.

ಶ್ರೀ ಬಿ. ಎಚ್. ಬೋರಣ್ಣಗೌಡರು.—ಪ್ರತಿಯೊಂದು ಕಡೆಯಲ್ಲೂ ರೆವೆನ್ಯೂ ಅಧಿಕಾರಿಗಳು ಸರ್ಪ್ಲಸ್ ಹೋಲ್ಡರ್ಲದವರಿಗೆ ಧಾನ್ಯ ಇಷ್ಟು ಕೊಡಬೇಕೆಂದು ತೊಂದರೆ ಮಾಡುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಎಲ್ಲಾ ಕಡೆಯೂ ಹಾಗೆ ತೊಂದರೆ ಕೊಟ್ಟಿದ್ದಾರೆಂದು ನಮ್ಮ ಗಮನಕ್ಕೆ ಬಂದಿಲ್ಲ.

ಶ್ರೀ ಬಿ. ಎಚ್. ಬೋರಣ್ಣಗೌಡರು.—ಅನೇಕ ಸರ್ಪ್ಲಸ್ ಹೋಲ್ಡರುಗಳಿಂದ ಗ್ರಾಮಾಂತರಗಳಲ್ಲಿ ಧಾನ್ಯ ವಸೂಲು ಮಾಡುವಾಗ ರೆವೆನ್ಯೂ ಅಧಿಕಾರಿಗಳು ಗ್ರಾಮಕ್ಕೆ ಇಷ್ಟು ಕೊಡಬೇಕೆಂದು ಬಲವಂತ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಒಂದು ಗ್ರಾಮಕ್ಕೆ ಇಷ್ಟು ಕೊಡಬೇಕೆಂದು ಕೇಳುವುದು ತಪ್ಪು. ಹಾಗೆ ಮಾಡಿದರೆ ನಿಲ್ಲಿಸಬೇಕಾಗುತ್ತೇವೆ.

ಶ್ರೀ ಬಿ. ಎಚ್. ಬೋರಣ್ಣಗೌಡರು.—ಹಾಗೆ ವಸೂಲು ಮಾಡಿರುವ ಸಂದರ್ಭಗಳು ಗಮನಕ್ಕೆ ಬಂದಾಗ ಏನು ಶಿಕ್ಷೆ ಮಾಡುತ್ತಿದ್ದೀರಿ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಕೂಡಲೇ ತಕ್ಕ ಕಾರ್ಯಕ್ರಮ ತೆಗೆದುಕೊಂಡು ಆ ರೀತಿ ಮಾಡುವುದನ್ನು ತಪ್ಪಿಸುತ್ತೇವೆ.

ಶ್ರೀ ಬಿ. ಎಚ್. ಬೋರಣ್ಣಗೌಡರು.—ಏನು ಕಾರ್ಯಕ್ರಮ ತೆಗೆದುಕೊಳ್ಳುವುದು?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಯಾವ ಅಧಿಕಾರಿಯು ಅದಕ್ಕೆ ಜವಾಬ್ದಾರನಾಗಿದ್ದಾನೆಯೋ ಅತನಿಗೆ ನೂಕ್ತವಾದ ಶಿಕ್ಷೆಯನ್ನು ಮಾಡುತ್ತೇವೆ.

ಶ್ರೀ ಬಿ. ಎಚ್. ಬೋರಣ್ಣಗೌಡರು.—ಈಗ ಮೈಸೂರು ಮತ್ತು ಹಾಸನ ಜಿಲ್ಲೆಗಳಲ್ಲಿ ಕೆಲವು ಕಡೆ ಹೀಗೆ ವಸೂಲು ಮಾಡಿರುವುದು ನಿಜವಿಲ್ಲ ಎಂದು ಸರ್ಕಾರಕ್ಕೆ ಅರಿಕೆಗಳು ಬಂದಿಲ್ಲವೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅದಕ್ಕೇ ಬೇರೆ ಪ್ರಶ್ನೆಯಿದೆ. ಅದನ್ನು ಪರಿಶೀಲನೆ ಮಾಡುತ್ತೇವೆ.

ಶ್ರೀ ಜಿ. ವೀರಪ್ಪನವರು (ಚಿತ್ರದುರ್ಗ ಜಿಲ್ಲೆ).—ಅನೇಕ ಕಪೆ ಸ್ಯಾಚ್ಯುಟರಿ ರೇಷನ್ ಪ್ರದೇಶದಲ್ಲಿರುವ ರೈತರು ಸರ್ಪ್ಲಸ್ ಹೋಲ್ಡರುಗಳೆಂದು ಅವರ ರೇಷನ್ ಕಾರ್ಡುಗಳನ್ನು ವಜಾಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಹಾಗೆ ಮಾಡುವುದಿಲ್ಲ. ಸರ್ಪ್ಲಸ್ ಹೋಲ್ಡರುಗಳ ಕಾರ್ಡಿನಲ್ಲಿ ಅವರಿಗೆ ಬಿಟ್ಟಿರುವ ಧಾನ್ಯದ ಪ್ರಮಾಣವನ್ನು ನಮೂದು ಮಾಡಿ ಹೆಚ್ಚಾಗಿರುವುದನ್ನು ಸರ್ಕಾರಕ್ಕೆ ಕೊಡಬೇಕೆಂದು ಹೇಳುತ್ತಾರೆ.

ಶ್ರೀ ಜಿ. ವೀರಪ್ಪನವರು.—ದಾವಣಗೆರೆಯಲ್ಲಿ ರೇಷನ್ ಕಾರ್ಡುಗಳನ್ನು ಕೆಲವು ರೈತರಿಗೆ ವಜಾಮಾಡಿ ಅವರಿಂದ ಕಿತ್ತುಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಇಲ್ಲ.

ಶ್ರೀ ಜಿ. ವೀರಪ್ಪನವರು.—ಹಾಗೆ ಮಾಡಿದ್ದರೆ ಅದನ್ನು ಸರಿಪಡಿಸುತ್ತೀರಾ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ವಿಚಾರ ಮಾಡುತ್ತೇವೆ. ಆದರೆ ಆ ಪ್ರಶ್ನೆ ಇದರಿಂದ ಉದ್ಭವಿಸುವುದಿಲ್ಲ.

ಶ್ರೀ ಬಿ. ಹುಚ್ಚೇಗೌಡರು (ತುಮಕೂರು ಜಿಲ್ಲೆ).—ಪಹಣಿ ಲೆಕ್ಕದ ಮೇಲೆ ತಾನೆ ಧಾನ್ಯವನ್ನು ವಸೂಲು ಮಾಡುವುದು?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಎಚ್. ಎಸ್. ಲೆಕ್ಕದ ಪ್ರಕಾರ ವಸೂಲು ಮಾಡುತ್ತಾರೆ. ಪಹಣಿ ಆಧಾರ ಅಷ್ಟೆ.

ಶ್ರೀ ಬಿ. ಹುಚ್ಚೇಗೌಡರು.—ಆಣಿ ಲೆಕ್ಕದ ಮೇಲೆ ತಾನೆ ಫಸಲನ್ನು ನಿರ್ಧಾರಮಾಡುವುದು? ಹತ್ತು ಆಣಿ ರಾಗಿ, ಜೋಳ, ಬತ್ತ ಅಂದರೆ ಎಷ್ಟು ಪಲ್ಲ ಆಗುತ್ತದೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅದು ತಪ್ಪಿಲು. ಒಂದೊಂದು ಪ್ರದೇಶಕ್ಕೂ ಬೆಳೆ ವ್ಯತ್ಯಾಸವಾಗುತ್ತದೆ.

ಶ್ರೀ ಬಿ. ಹುಚ್ಚೇಗೌಡರು.—ಹಾಗಾದರೆ ಒಂದು ರೂಪಾಯಿ ಬೆಳೆ ಎಂದು ಅಂದಾಜು ಮಾಡಿದರೆ ಇಷ್ಟಾಗುತ್ತದೆಂದು ಗೊತ್ತಾಗುವುದಿಲ್ಲವೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಹಾಗೆ ಗೊತ್ತು ಮಾಡುವುದು ಬಹಳ ಕಷ್ಟ. 16 ಆಣಿ ಬೆಳೆ ಶ್ರೀರಂಗಪಟ್ಟಣ ಮತ್ತು ಶಿವಮೊಗ್ಗಾದಲ್ಲಿದ್ದರೆ ಒಂದುಕಡೆಗೂ ಇನ್ನೊಂದುಕಡೆಗೂ ಬೆಳೆ ವ್ಯತ್ಯಾಸವಾಗುತ್ತದೆ.

ಶ್ರೀ ಬಿ. ಹುಚ್ಚೇಗೌಡರು.—16 ಆಣಿ ಬೆಳೆಯೆಂದರೆ ಎಲ್ಲಾ ಕಡೆಯೂ ಒಂದೇ ತಾನೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಶ್ರೀರಂಗಪಟ್ಟಣದಲ್ಲಿ 20 ಪಲ್ಲ ಆದರೆ ಶಿವಮೊಗ್ಗದಲ್ಲಿ 10 ಪಲ್ಲ ಆಗಬಹುದು.

ಶ್ರೀ ಬಿ. ಹುಚ್ಚೇಗೌಡರು.—16 ಆಣಿ ಬೆಳೆಯೆಂದು ಹೇಳಿದ ಮೇಲೆ ಎಲ್ಲಾಕಡೆಯೂ 20 ಪಲ್ಲ ಅಥವಾ ನಿಗದಿಯಾದ ರೀತಿಯಲ್ಲಿ ಒಂದೇಸಮಾನಾಗಿ ಇರಬೇಕಲ್ಲವೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಹಾಗೆ ಮಾಡಿದರೆ ದೇಶದಲ್ಲಿ ಬಹಳ ತೊಂದರೆಯಾಗುತ್ತದೆ ಎಂಬುದನ್ನು ಬಹಳವಾಗಿ ಯೋಚನೆ ಮಾಡಬೇಕು. ಒಂದು ಕಡೆ ಜಾಸ್ತಿ, ಇನ್ನೊಂದುಕಡೆ ಕಡಮೆ ಆಗಬಹುದು.

ಶ್ರೀ ಬಿ. ಹುಚ್ಚೇಗೌಡರು.—ಶ್ಯಾನುಭೋಗರು ಒಂದು ರೂಪಾಯಿ ಬೆಳೆ ಎಂದು ಬರೆದಿರುವ ಕಡೆ ಒಂದು ಕಡೆ 10 ಪಲ್ಲ, ಇನ್ನೊಂದುಕಡೆ 5 ಪಲ್ಲ ಎಂದು ಬರೆದರೆ ರೈತರಿಗೆ ತೊಂದರೆಯಲ್ಲವೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅದು ಆಯಾ ಪ್ರದೇಶದಲ್ಲಿ ಹೇಗೆ ಬೆಳೆದಿರುವೆಯೆಂದು ನೋಡಿ ಮಾಡಬೇಕೇ ಏನಾ ಎಲ್ಲಾ ಕಡೆಯೂ ಒಂದೇ ರೀತಿಯಾಗಿ ಬರೆಯುವುದು ನ್ಯಾಯವೂ ಅಲ್ಲ, ಧರ್ಮವೂ ಅಲ್ಲ.

ಶ್ರೀ ಬಿ. ಹುಚ್ಚೇಗೌಡರು.—ನನ್ನ ಪ್ರಶ್ನೆಯನ್ನು ಸರಿಯಾಗಿ ಅರ್ಥಮಾಡಿಕೊಂಡಿಲ್ಲ. ಒಂದಾಣಿ ಬೆಳೆಗೆ ಒಂದುಪಲ್ಲ ಎಂದು ಒಂದುಕಡೆ ಪಹಣಿ ಬರೆದರೆ ಅದೇ ರೀತಿಯಲ್ಲಿ ಪ್ರತಿಯೊಂದು ಕಾಳಕ್ಕೂ ಇಷ್ಟು ಆಣಿ ಬೆಳೆಗೆ ಇಷ್ಟುಪಲ್ಲ ಎಂದು ಲೆಕ್ಕ ಒಂದೇತರಹ ಇರಬೇಡವೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಫಲವತ್ತಾದ ಜಮೀನಾದರೆ, ಹೆಚ್ಚು ಮಳೆಯಾದರೆ ಒಂದು ಕಡೆ ಹೆಚ್ಚು ಬೆಳೆ ಬರಬಹುದು. ಜಮೀನು ಉತ್ಕೃಷ್ಟವಾಗಿಲ್ಲದೆ ಮಳೆ ಸರಿಯಾಗಿ ಆಗದಿರುವಕಡೆ ಕಡಮೆ ಬರಬಹುದು.

ಶ್ರೀ ಬಿ. ಹುಚ್ಚೇಗೌಡರು.—ಫಲವತ್ತಾದ ಜಮೀನಿನಲ್ಲಿ ಜಾಸ್ತಿಯಾಗಿ 16ಆಣಿ ಬೆಳೆ ಎಂದು ಬರೆಯುವುದು ಸಂಸ್ಥಾನದಲ್ಲೆಲ್ಲಾ ಒಂದೇ ರೀತಿಯಾಗಿರಬೇಕಲ್ಲವೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.— ಸಂಸ್ಥಾನದ ಲ್ಲೆಲ್ಲಾ ಒಂದೇ ರೀತಿಯಾಗಿರುವುದಿಲ್ಲ. ಒಂದು ಹಳ್ಳಿ ಯಲ್ಲಿ ಒಂದುವೇಳೆ ಒಂದೇರೀತಿ ಇದ್ದರೂ ಇರಬಹುದು.

ಶ್ರೀ ಬಿ. ಹುಚ್ಚೇಗೌಡರು.—ಒಂದೇ ಹಳ್ಳಿಯಲ್ಲೂ ಕೂಡ ಒಂದೇ ರೀತಿಯಾಗಿ ಬರೆದಿಲ್ಲ ಎಂದು ನಾನು ಹೇಳುವುದು.

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು (ಹಣಕಾಸು ಮತ್ತು ಕೈಗಾರಿಕೆ ಸಚಿವರು).—ಒಂದೇ ಹಳ್ಳಿಯಲ್ಲಾದರೆ ಒಂದೇರೀತಿ ಇದ್ದರೂ ಇರಬಹುದು ಎಂದು ಉತ್ತರ ಹೇಳಿದ್ದಾರೆ.

ಶ್ರೀ ಬಿ. ಹುಚ್ಚೇಗೌಡರು.—ಒಬ್ಬ ರೈತನಿಗೆ ಈ ದಿವಸ ಆರಾಣೆ ಎಂದು ಬರೆದು 6 ಪಲ್ಲ ಎಂದು ಲೆಕ್ಕ ಹಾಕಿ ಅದೇ ಇನ್ನೊಬ್ಬ ರೈತನಿಗೆ ಅದೇ ಆರಾಣೆಗೆ 3 ಪಲ್ಲ ಎಂದು ಲೆಕ್ಕಹಾಕಿದ್ದಾರೆ, ಈರೀತಿ ಅನೇಕ ಕಡೆ ಆಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಉದಾಹರಣೆ ಹೇಳಿದರೆ ವಿಚಾರ ಮಾಡುತ್ತೇವೆ.

ಶ್ರೀ ಬಿ. ಹುಚ್ಚೇಗೌಡರು.—ಕುಣಿಗಲು ತಾಲ್ಲೂಕು ಅಮೃತೂರಿನಲ್ಲಿ ಈ ವಿಚಾರದಲ್ಲಿ ಗಲಾಟೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅದು ಈಚೆಗೆ ಸರಿಹೋಗಿದೆ.

ಶ್ರೀ ಬಿ. ಹುಚ್ಚೇಗೌಡರು.—ಇನ್ನೂ ಅದು ಸರಿ ಹೋಗಿಲ್ಲ. ಶ್ಯಾನುಭೋಗರು ಬರೆದಿರುವುದನ್ನು ಜಿಲ್ಲಾ ಧಿಕಾರಿಗಳು ನೋಡಿ ಸರಿಮಾಡಿದ್ದಾರೆ. ಅದರಂತೆ ವಸೂಲಾಗುತ್ತಿದೆ. ಆದರೆ ಜಿಲ್ಲಾಧಿಕಾರಿಗಳು ಮತ್ತು ಶ್ಯಾನುಭೋಗರು ರಾಜಿ ಆಗಿಕೊಂಡರೆ ನಿವಾರಣೆ ಮಾಡುತ್ತೇವೆಂದರೆ ಹೇಗೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಹಾಗಲ್ಲ. ಜಿಲ್ಲಾಧಿಕಾರಿಗಳು ಖುದ್ದಾಗಿ ನೋಡಿ ಎಕ್ಸ್‌ಪರಿಮೆಂಟ್ ಮಾಡಿ ಸರಿಮಾಡಿದ್ದಾರೆ.

ಶ್ರೀ ಬಿ. ಹುಚ್ಚೇಗೌಡರು.—ಲೆಕ್ಕ ಬರೆಯುವಾಗ ಒಬ್ಬನಿಗೆ ರೂಪಾಯಿ ಬೆಳೆಗೆ 4 ಪಲ್ಲ ಎಂದೂ ಇನ್ನೊಬ್ಬನಿಗೆ ಅದೇ ರೂಪಾಯಿ ಬೆಳೆಗೆ 16 ಪಲ್ಲ ಎಂದೂ ಬರೆದಿರುವುದನ್ನು ಸರಿಮಾಡಿದ್ದೀರಾ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಹಾಗೆ ಬರೆದಿಲ್ಲ. ಎಚ್. ಎಸ್. ಲೆಕ್ಕದಲ್ಲಿ ಮನೆಯಲ್ಲಿರುವ ಜನ, ಅವನ ಉತ್ಪತ್ತಿ, ಅವನಿಗೆ ಬಿಡಬೇಕಾದ ದವನ ಮುಂತಾದ ಎಲ್ಲಾ ತಪಶೀಲನ್ನೂ ಸರಿಯಾಗಿ ನೋಡಿ ಬರೆದಿದೆ.

ಉಪಾಧ್ಯಕ್ಷರು.—ಆರಾಣೆ ಬೆಳೆ ಎಂದು ಬರೆದಿರುವುದು ಕೆಲವುಕಡೆ 16 ಪಲ್ಲ ಮತ್ತೆ ಕೆಲವುಕಡೆ 3 ಪಲ್ಲ ಎಂದು ಲೆಕ್ಕ ಹಾಕಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ಎಂದು ಮಾನ್ಯ ಸದಸ್ಯರು ಕೇಳುತ್ತಿದ್ದಾರೆ.

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅದು ಸರ್ಕಾರದ ಗಮನಕ್ಕೆ ಬಂದಿಲ್ಲ.

ಶ್ರೀ ಬಿ. ಹುಚ್ಚೇಗೌಡರು.—ಅಮೃತೂರಿನಿಂದ ವರದಿ ಬಂದಿಲ್ಲವೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಬಂದಿದೆ.

ಶ್ರೀ ಬಿ. ಹುಚ್ಚೇಗೌಡರು.—ಅಲ್ಲಿನವರಿಗೆ ಪರಿಹಾರ ಕೊಡಿಸಿದೆಯೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಪರಿಹಾರ ನೀಡಿದೆಯೆಂದು ವರದಿಯಾಗಿದೆ.

ಶ್ರೀ ಬಿ. ಹುಚ್ಚೇಗೌಡರು.—ಇನ್ನು ಕೆಲವುಕಡೆ ಅದೇ ರೀತಿ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಇಲ್ಲ.

ಶ್ರೀ ಬಿ. ಹುಚ್ಚೇಗೌಡರು.—ಇನ್ನು ಮುಂದಾದರೂ ಕೂಡ ಪಹಣಿ ಬರೆಯುವ ಶ್ಯಾನುಭೋಗರು ಹೆಚ್ಚು ಕಡಮೆ ಮಾಡದಿರುವಂತೆಯೂ, ಇಷ್ಟಾಣಿ ಫಸಲಿಗೆ ಇಷ್ಟು ಪಲ್ಲ ಎಂದು ನಿಗದಿಯಾಗಿ ಬರೆಯುವಂತೆಯೂ, ಎಲ್ಲಾ ಕಡೆಯೂ ಒಂದೇ ರೀತಿಯಾಗಿದ್ದು ಬದರಾಯಿಸದಿರುವಂತೆಯೂ ತಕ್ಕ ಕಾರ್ಯಕ್ರಮ ತೆಗೆದುಕೊಳ್ಳುತ್ತೀರಾ ?

The Hon'ble Sri T. MARIAPPA.—It is not a supplementary. It is a request for something being done.

ಶ್ರೀ ಬಿ. ಚನ್ನಬೈರೇಗೌಡರು (ಬೆಂಗಳೂರು ಜಿಲ್ಲೆ).—(ಡಿ) ಪ್ರಶ್ನೆಗೆ ಉತ್ತರವಾಗಿ 'ಇಲ್ಲ' ಎಂದು ಹೇಳಿದ್ದೀರಿ. ಸರ್‌ಪ್ಲಸ್ ಯಾವ ಆಧಾರದ ಮೇಲೆ ನಿಗದಿ ಮಾಡುತ್ತೀರಿ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಆಗಲೇ ಉತ್ತರ ಹೇಳಿದೆ. ಎಚ್. ಎಸ್. ಲೆಕ್ಕದ ಆಧಾರದ ಮೇಲೆ ಮಾಡುತ್ತೇವೆ.

ಶ್ರೀ ಬಿ. ಚನ್ನಬೈರೇಗೌಡರು.—ಎಚ್. ಎಸ್. ಲೆಕ್ಕವನ್ನು ಬರೆಯುವವರು ಯಾರು ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಶ್ಯಾನುಭೋಗರು.

ಶ್ರೀ ಬಿ. ಚನ್ನಬೈರೇಗೌಡರು.—ಶ್ಯಾನುಭೋಗರು ಬರೆದದ್ದನ್ನು ಅಮಲ್ದಾರರು ಅಥವಾ ರೆವಿನ್ಯೂ ಅಧಿಕಾರಿಗಳು ತಿದ್ದುವುದು ಗೊತ್ತೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ತಿದ್ದುತ್ತಾರೆ ಎಂದು ಹೇಳುವುದಕ್ಕಾಗುವುದಿಲ್ಲ, Check up ಮಾಡುತ್ತಾರೆ.

ಶ್ರೀ ಬಿ. ಚನ್ನಬೈರೇಗೌಡರು.—ಶ್ಯಾನುಭೋಗರು 4 ಆಣೆ ಅಥವಾ 6 ಆಣೆ ಫಸಲಾಗುತ್ತದೆ ಎಂದು ಬರೆದಿದ್ದನ್ನು ಅಮಲ್ದಾರರು 12 ಆಣೆ ಎಂಬುದಾಗಿ ತಿದ್ದಿದ್ದರೆ, ಅಂಥಾ ಸಂದರ್ಭದಲ್ಲಿ ಪರಿಹಾರ ಕೊಡುತ್ತೀರಾ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಆರೀತಿ ಆಗಿರುವ ವಿಷಯ ನಮ್ಮ ಗಮನಕ್ಕೆ ಬಂದರೆ ಪರಿಶೀಲನೆ ಮಾಡುತ್ತೇವೆ.

ಶ್ರೀ ಬಿ. ಚನ್ನಬೈರೇಗೌಡರು.—ಕಾಗದದ ಮೇಲೆ ಸರ್‌ಪ್ಲಸ್ ತಿದ್ದಿದರೆ ಹೆಚ್ಚು ಬೆಳೆ ಬೆಳೆಯುವುದಿಲ್ಲ ಎಂಬುದು ಗೊತ್ತೇ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅದು ಸ್ಪಷ್ಟವಾಗಿರುವ ವಿಚಾರ.

ಶ್ರೀ ಬಿ. ಚನ್ನಬೈರೇಗೌಡರು.—ಸರ್‌ಪ್ಲಸ್ ನಿಗದಿ ಮಾಡುವಾಗ ವರ್ಷಕ್ಕೆ 150 ಸೇರು ಬಿಟ್ಟು ಉಳಿದದ್ದನ್ನು ನಿಗದಿ ಮಾಡಬೇಕೆಂದಿಲ್ಲವೇ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಎಚ್. ಎಸ್. ಲೆಕ್ಕದ ಪ್ರಕಾರ ಎಷ್ಟು ಬಿಡಬೇಕೆಂದಿದೆಯೋ ಅಷ್ಟನ್ನು ಬಿಡುತ್ತೇವೆ.

ಶ್ರೀ ಬಿ. ಚನ್ನಬೈರೇಗೌಡರು.—150 ಸೇರು ಬಿಟ್ಟು, ಅದರ ಮೇಲೆತಾನೆ ನಿಗದಿ ಮಾಡುವುದು ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅದು ಒಂದೇ ಅಲ್ಲ, ಸೀಡ್ ಅಲೋಯೆನ್ಸು, ಫಾರಂ ಲೇಬರ್ ಇವಕ್ಕೆಲ್ಲಾ ಬಿಟ್ಟು ಬಾಕಿಯಾದ್ದನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಬಿ. ಚನ್ನಬೈರೇಗೌಡರು.—ಸೀಡ್ ಅಲೋಯೆನ್ಸು 10 ಸೇರು ಅಲ್ಲವೇ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಇಲ್ಲ. ರಾಗಿ, ಬತ್ತ, ಜೋಳ ಒಂದೊಂದಕ್ಕೂ ವ್ಯತ್ಯಾಸ ಇದೆ. ಸ್ಥಳದ ಮೇಲೂ ಸಹ ವ್ಯತ್ಯಾಸವಾಗುತ್ತದೆ. ಸೀಡ್ ಅಲೋ

ಯರ್ಪಸ್ ಎಷ್ಟು ಬಿಡಬೇಕೆಂಬುದು ನುಗ್ಗಿ ಆಜ್ಞೆಯಲ್ಲಿ ಇದೆ, ಅದನ್ನು ಹೇಳಬೇಕಾಗಿಲ್ಲ.

ಶ್ರೀ ಬಿ. ಚನ್ನಬ್ಯೆರೇಗೌಡರು.—ಒಂದು ವರ್ಷಕ್ಕೆ 150 ಸೇರು ಸಾಕಾಗಬಹುದೇ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಆ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಬಿ. ಚನ್ನಬ್ಯೆರೇಗೌಡರು.—ರೆವಿನ್ಯೂ ಅಧಿಕಾರಿಗಳು ಎಚ್. ಎಸ್. ಲೆಕ್ಕ ತಿದ್ದಿರುವುದನ್ನು ತಮ್ಮ ಗಮನಕ್ಕೆ ತಂದರೆ ಸರಿಪಡಿಸುತ್ತೀರಾ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಆಗಲೇ ಉತ್ತರ ಕೊಟ್ಟಿದ್ದೇನೆ.

ಶ್ರೀ ಎಚ್. ಎಂ. ಚನ್ನಬಸಪ್ಪನವರು (ಮೈಸೂರು ಜಿಲ್ಲೆ).—ಬತ್ತದ ಟಾರ್ಜೆಟ್ ನಿಗಡಿಮಾಡಿರುವುದು ಜಿಲ್ಲಾವಾರು ಎಷ್ಟು ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ನೋಟೀಸ್.

ಶ್ರೀ ಎಚ್. ಎಂ. ಚನ್ನಬಸಪ್ಪನವರು.—ಮೈಸೂರು ಜಿಲ್ಲೆಯ ಟಾರ್ಜೆಟ್ ಎಷ್ಟು ?

ಮಾನ್ಯ ಶ್ರೀ ಟಿ. ವರಿಯಪ್ಪನವರು.—ನೋಟೀಸ್.

ಶ್ರೀ ಎಚ್. ಎಂ. ಚನ್ನಬಸಪ್ಪನವರು.—ಹೋಗಲಿ, ಶಿವಮೊಗ್ಗಾ ಜಿಲ್ಲೆಯ ಟಾರ್ಜೆಟ್ ಎಷ್ಟು ಎಂಬುದನ್ನು ಹೇಳುವುದಕ್ಕಾಗುತ್ತದೆಯೇ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಶಿವಮೊಗ್ಗಾ ಜಿಲ್ಲೆಯ ಟಾರ್ಜೆಟ್ 7 ಲಕ್ಷ ಪಲ್ಲ.

ಶ್ರೀ ಎಚ್. ಎಂ. ಚನ್ನಬಸಪ್ಪನವರು.—ಕೃಷ್ಣರಾಜನಗರದ ಟಾರ್ಜೆಟ್ ಹೇಳಬಲ್ಲಿರಾ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—It may probably be 2,10,000 pallas.

ಶ್ರೀ ಎಚ್. ಎಂ. ಚನ್ನಬಸಪ್ಪನವರು.—ಸರ್‌ಪ್ಲಸ್ ವಸೂಲು ಮಾಡುವಾಗ ಶ್ಯಾನುಭೋಗರು ಸರ್‌ಪ್ಲಸ್ ಎಂಬುದಾಗಿ ನೋಟಿಫೈ ಮಾಡಿದ ಸರ್‌ಪ್ಲಸ್ ಮೇಲೆ ವಸೂಲು ಮಾಡುತ್ತೀರಾ ಅಥವಾ ರೈತರಲ್ಲಿ actual ಆಗಿ ಇರುವ ಸರ್‌ಪ್ಲಸ್ ಆಧಾರದ ಮೇಲೆ ವಸೂಲು ಮಾಡುತ್ತೀರಾ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಉತ್ತರ ಕೊಟ್ಟಿದ್ದೇನೆ. ಎಲ್ಲಾ ಸಂದರ್ಭಗಳನ್ನೂ ಗಣನೆಗೆ ತೆಗೆದುಕೊಂಡು ಸರ್‌ಪ್ಲಸ್ ಎಂಬುದಾಗಿ ನಿರ್ಧರವಾಗಿರತಕ್ಕದ್ದನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಎಚ್. ಎಂ. ಚನ್ನಬಸಪ್ಪನವರು.—ರೈತನಲ್ಲಿ ಎಷ್ಟು ಸರ್‌ಪ್ಲಸ್ ಇದೆಯೋ ಅಷ್ಟನ್ನು ತೆಗೆದುಕೊಳ್ಳಬೇಕೆಂದು ಕಾನೂನಿನಲ್ಲಿ ವಿಧಾಯಕವಾಗಿದೆ. ಅದರಂತೆ ರೈತರಲ್ಲಿ actual ಆಗಿ ಇರುವುದನ್ನು ನೋಡಿಕೊಂಡು ತಾನೆ ಉಳಿದದ್ದನ್ನು ತೆಗೆದುಕೊಳ್ಳುವುದು ?

The Hon'ble Sri T. MARIAPPA.—On the basis of our information as evident from the H. S. accounts, we procure only the surplus.

Sri H. M. CHANNABASAPPA.—Shall I take it that the Government act information and not on the actualities ?

The Hon'ble Sri T. MARIAPPA.—So far as the yield is concerned we act on the approximate actualities.

Sri H. M. CHANNABASAPPA.—So, it is not on correct actualities but on approximate actualities that the Government act ?

The Hon'ble Sri T. MARIAPPA.—Sir, it is evident from the Harvest Order. If we procure after threshing, then what is stated by my Hon'ble friend will come true. Otherwise we have to act on the estimated production per acre.

Sri H. M. CHANNABASAPPA.—May I know whether the Government are collecting only the surpluses on the basis the actual possession of foodgrains by the raiyat ?

The Hon'ble Sri T. MARIAPPA.—In fact, to be frank with the House, we are collecting much less.

Sri H. M. CHANNABASAPPA.—Have the Government issued confidential instructions to the Deputy Commissioners to see that somehow the target is reached ?

The Hon'ble Sri T. MARIAPPA.—Not at all true. the Government would never commit the mistake of issuing any such circular.

Sri H. M. CHANNABASAPPA.—Has it come to the notice of the Government that there has been a lot of discrimination in the estimation of surpluses between the rich and the poor ?

The Hon'ble Sri T. MARIAPPA.—It has not come to our notice.

Sri H. M. CHANNABASAPPA.—Between the influential and the non-influential ?

The Hon'ble Sri T. MARIAPPA.—No.

Sri H. M. CHANNABASAPPA.—Has it come to the notice of the Government that their officers have entered the houses of raiyats during night times for procurement ?

The Hon'ble Sri T. MARIAPPA.—That question does not arise out of this.

Sri H. M. CHANNABASAPPA.—It does arise. Here is a question whether there is harassment during procurement. So my question is relevant, Mr. Deputy Speaker ?

The Hon'ble Sri T. MARIAPPA.—In fact that question has been put and answered.

Sri H. M. CHANNABASAPPA.—It is the first time I am putting this question. Has it come to the notice of the Government that their officers have

(SRI H. M. CHANNABASAPPA.)

entered the houses of raiyats after sunset for procurement of grains ?

The Hon'ble Sri T. MARIAPPA.—I have already answered that question. On the second day that question was put and answered and I do not think it can be repeated.

Mr. DEPUTY SPEAKER.—Can the Hon'ble Member give a concrete example ?

Sri H. M. CHANNABASAPPA.—I am asking whether it has come to the notice of the Government ?

The Hon'ble Sri T. MARIAPPA.—It has been answered.

Sri H. M. CHANNABASAPPA.—When ? I am asking a specific supplementary in respect of a specific question. Government may have given hundred answers to hundred questions previously.

The Hon'ble Sri T. MARIAPPA.—On the second day of this very session that question was answered.

Mr. DEPUTY SPEAKER.—The Hon'ble Minister states that he has replied to that question on the second day of this session.

Sri H. M. CHANNABASAPPA.—Have the Government received any telegram during the course of the session that procurement during night times is still going on in Saligame village, Hassan Taluk ?

The Hon'ble Sri T. MARIAPPA.—I want notice to find it out.

Sri H. M. CHANNABASAPPA.—I am asking whether a telegram has been received during the course of the session and for that question no notice is required for answer.

The Hon'ble Sri T. MARIAPPA.—I receive hundreds of telegrams and I want notice to find out whether that particular telegram is received.

Sri H. M. CHANNABASAPPA.—May I know whether raiding during night times after sunset is prohibited under the Harvest Order ?

The Hon'ble Sri T. MARIAPPA.—No such question arises out of the Harvest Order because it is put in the statute.

ಶ್ರೀ ಡಿ. ಎಂ. ಸಿದ್ದಯ್ಯನವರು (ಮೈಸೂರು ಜಿಲ್ಲೆ).—(a) ಪ್ರಶ್ನೆಗೆ ಉತ್ತರವಾಗಿ 3,333 ಪಲ್ಲ ಜೋಳ ವಸೂಲಾಗಿದೆ ಎಂದು ಹೇಳಿದ್ದೀರಿ, ಇದು ಡಿಫೋಏನಲ್ಲ ಜನಗಳಿಂದ ವಸೂಲಾದದ್ದೇ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಜನಗಳೇ ಬಂದು ಸರಂಡರ್ ಮಾಡಿರುವುದೂ ಇದೆ ; ರೆವಿನ್ಯೂ ಅಧಿಕಾರಿಗಳು ವಸೂಲು ಮಾಡಿರುವುದೂ ಇದೆ.

ಶ್ರೀ ಡಿ. ಎಂ. ಸಿದ್ದಯ್ಯನವರು.—ಹೋದಸಾರಿ ಮೈಸೂರು ಡಿಸ್ಟ್ರಿಕ್ಟ್‌ನ ನಂಜನಗೂಡು ಸಬ್ ಡಿವಿಜನ್‌ನಲ್ಲಿ ಜೋಳದ ಬೆಳೆ ಆಗದೇ ಇರುವುದು ಗೊತ್ತೇ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಎಲ್ಲಾ ಕಡೆಯೂ ಹಾಗೆ ಆಗಿಲ್ಲ. ಗುಂಡ್ಲುಪೇಟೆ, ಚಾಮರಾಜನಗರ, ಯಳಂದೂರಿನ ಕೆಲವು ಪ್ರದೇಶಗಳಲ್ಲಿ ಮಾತ್ರ ಆರೀತಿ ಆಗಿದೆ.

ಶ್ರೀ ಡಿ. ಎಂ. ಸಿದ್ದಯ್ಯನವರು.—ಅದಕ್ಕೋಸ್ಕರವೇ 3,333 ಪಲ್ಲದಷ್ಟು ಕೆಲವು ಭಾಗದಲ್ಲಿ ವಸೂಲಾಗಿದೆಯಲ್ಲವೇ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಮೈಸೂರು ಡಿಸ್ಟ್ರಿಕ್ಟ್‌ನಲ್ಲಿ ವಸೂಲಾಗಿರುವುದನ್ನು ನಮೂದಿಸಿದೆ.

ಶ್ರೀ ಡಿ. ಎಂ. ಸಿದ್ದಯ್ಯನವರು.—ಇಲ್ಲಿ ನೀವು ಹೇಳಿರುವ 3,000 ಪಲ್ಲಗಳನ್ನು ತಾವು ಯಾವ ರೀತಿ ವಸೂಲಿ ಮಾಡಿದ್ದೀರೆಂಬುದನ್ನು ಹೇಳುತ್ತೀರಾ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಮೈಸೂರು ಡಿಸ್ಟ್ರಿಕ್ಟಿನ ಎಲ್ಲಾ ತಾಲ್ಲೂಕುಗಳಲ್ಲೂ ಇರತಕ್ಕ ಸರ್ಪ್ಲಸ್ ಹೋಲ್ಡರುಗಳಿಂದ ತೆಗೆದುಕೊಂಡಿದ್ದಾರೆ.

ಶ್ರೀ ಡಿ. ಎಂ. ಸಿದ್ದಯ್ಯನವರು.—ಸರ್ಪ್ಲಸ್ ಹೋಲ್ಡರುಗಳಲ್ಲದೆ ಬೇರೆಯವರಿಂದಲೂ ಬಲಾತ್ಕಾರವಾಗಿ ಕಿತ್ತುಕೊಂಡು ಹೋಗಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಹಾಗೆ ಮಾಡಿಲ್ಲ. ಆರೀತಿ ಮಾಡಿದ್ದರೆ ಇನ್ನೂ ಎಷ್ಟೋ ವಸೂಲು ಮಾಡಬಹುದಾಗಿತ್ತು.

ಶ್ರೀ ಡಿ. ಎಂ. ಸಿದ್ದಯ್ಯನವರು.—ಮರಳವಾಡಿ, ಕೊಳ್ಳೇಗಾಲದ ಕಡೆಗಳಲ್ಲಿ ಸರ್‌ಪ್ಲಸ್ ಹೋಲ್ಡರುಗಳಲ್ಲದ ಕೆಲವು ಜನರಿಂದ ದೌರ್ಜನ್ಯದ ರೀತಿಯಲ್ಲಿ ವರ್ತಿಸಿ ದವಸವನ್ನು ಕಿತ್ತುಕೊಂಡು ಹೋಗಿರುವ ನಿದರ್ಶನ ತಮ್ಮ ಗಮನಕ್ಕೆ ಬಂದಿದೆಯೇ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅದು ಕೋರ್ಟಿನ ವಿಚಾರಣೆಯಲ್ಲಿದೆ. ಸಬ್‌ಜ್ಯುಡೀಸ್ ಆಗಿರುವುದರಿಂದ ನಾನೇನೂ ಹೇಳುವುದಿಲ್ಲ.

ಶ್ರೀ ಡಿ. ಎಂ. ಸಿದ್ದಯ್ಯನವರು.—ಹುಲಹಳ್ಳಿ ಹೋಬಳಿಯ ಕಣನೂರು ಗ್ರಾಮದಲ್ಲಿ ಈರೀತಿ ಸಾಮಾನ್ಯರೈತರ ಮನೆಗೆ ನುಗ್ಗಿ ದವನ ತೆಗೆದುಕೊಂಡು ಕರುಕುಳ ಕೊಟ್ಟಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ನೋಟೀಸ್ ಕೊಟ್ಟರೆ ಹೇಳುತ್ತೇನೆ.

ಶ್ರೀ ಡಿ. ಎಂ. ಸಿದ್ದಯ್ಯನವರು.—ನಿನ್ನೆ ದಿವಸವೂ ಕೂಡ ಆ ಊರಿನವರು ಇಲ್ಲಿಗೇ ಬಂದು ಅಲ್ಲಿ ಅಧಿಕಾರಿಗಳು ದೌರ್ಜನ್ಯ ರೀತಿಯಿಂದ ವರ್ತಿಸಿ ಎಲ್ಲಾ ಜನರಿಂದಲೂ ಹೆಚ್ಚಾಗಿ ವಸೂಲಿ ಮಾಡುತ್ತಿರುವುದನ್ನು ತಿಳಿಸಿದ್ದಾರೆ. ಇದನ್ನು ತಪ್ಪಿಸುವುದಕ್ಕೆ ಸರಿಯಾದ ಕಾರ್ಯಕ್ರಮ ತೆಗೆದುಕೊಂಡು ಆ ಜನರಿಗಾಗುತ್ತಿರುವ ಕರುಕುಳವನ್ನು ಹೋಗಲಾಡಿಸುತ್ತೀರಾ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಮಾನ್ಯ ಸದಸ್ಯರಿಗೆ ಗೊತ್ತಿರುವ ಹಾಗೆ, ಸರ್ಪ್ಲಸ್ ಹೋಲ್ಡರುಗಳಿಂದ ಮಾತ್ರ ವಸೂಲು ಮಾಡಬೇಕೆಂದೂ, ಅದೂ ಶಾಂತ ರೀತಿಯಲ್ಲಿರಬೇಕೆಂದೂ strict instructions ಕೊಟ್ಟಿದ್ದೇವೆ.

Mr. DEPUTY SPEAKER.—Question hour is over.

Sri V. S. NARAYANA RAO.—No. 151 is my question. I request that it may be taken up tomorrow.

Mr. DEPUTY SPEAKER.— We will consider; now Question time is over. There is a Short-Notice Question by Sri M. N. Jois.

SHORT NOTICE QUESTION AND ANSWER.

Resolution of Mandya Municipal Council re. restriction on the term of President and Vice-President.

Sri M. N. JOIS (Mysore District—General).—Will the Government be pleased to state:—

(1) when the Municipal Council of Mandya passed resolution requesting for restriction of the terms of the President and the Vice-President of Mandya for one year (copies of the resolution and orders of Government thereon may kindly be furnished);

(2) whether any resolutions were passed subsequently to ex end the period of persons in the Offices of President and Vice-President by another year (copies of resolutions with dates and orders passed thereon may kindly be furnished);

(3) whether they have taken legal advice in the matter and what that advice is?

Sri M. MADIAH (Mysore District—Depressed Class).—Copies of this question and answer to it may be furnished to the Members.

Mr. DEPUTY SPEAKER.—Copies cannot be supplied.

Mushir-ul Mulk J. MOHAMED IMAM (Chitaldrug *cum* Tumkur—Muslim).—I do not know why this procedure is started.

The Hon'ble Sri H. C. DASAPPA (The Minister for Finance and Industries).—We are improving.

Janab J. MOHAMED IMAM.—It is no improvement I must say. In order to facilitate members you have to supply them with copies of short notice question.

Sri M. MADIAH.—This question may be taken up tomorrow. On behalf of the House I request the Chair to permit the Hon'ble Member to take up the question tomorrow when copies of the question and answers are supplied to the House.

Mr. DEPUTY SPEAKER.—ಅಲ್ಪಕಾಲಾವಧಿ ಪ್ರಶ್ನೆಗಳಿಗೆ ಆ ರೀತಿ ಮುದ್ರಿಸಿ ಎಲ್ಲರಿಗೂ ಹಂಚುವ ಪದ್ಧತಿಯಿಲ್ಲ. The purpose of the Short-Notice Question will not be served if the question and answer are printed and supplied. Answer to Short-Notice Question will be furnished very early and there will be delay if the procedure of suppling printed copies of question and answers is followed. The purpose of short notice ques ion will not be serve l thereby.

ಜನಾಬ್ ಜೆ. ಮುಹಮದ್ ಇಮಾಂರವರು.—ಆ ಪದ್ಧತಿ ಇತ್ತು. ಈಗ ಕೊಡದಿರುವುದು ಪದ್ಧತಿಗೆ ವಿರೋಧವಾಗಿದೆ.

Sri M. MADIAH.—We cannot put supplementaries on this question. ಉಪ ಪ್ರಶ್ನೆಗಳನ್ನು ಹಾಕುವುದಕ್ಕೆ ನಮಗೆ ಬಹಳ ಕಷ್ಟ. ಆದ್ದರಿಂದ ನಾವು ಈ ಪ್ರಶ್ನೆಗಳನ್ನು ಎಲ್ಲರಿಗೂ ಒದಗಿಸಿ ನಾಳೆ ಚರ್ಚೆಗೆ ತೆಗೆದು ಕೊಳ್ಳುವುದರಿಂದ ಏನೂ ತೊಂದರೆಯಾಗುವುದಿಲ್ಲ. ದಯವಿಟ್ಟು ಅಧ್ಯಕ್ಷರು ಇದಕ್ಕೆ ಅವಕಾಶ ಕೊಡಬೇಕೆಂದು ಕೇಳಿ ಕೊಳ್ಳುತ್ತೇನೆ.

Sri D. H. CHANDRASEKHARAIYA (Chitaldrug District—General).—We have adopted the practice of printing question and answer and distributing them to the Members. Of course, this procedure does not exist in other legislatures. Since you have adopted the practice of printing question and answer, I do not think you will be violating any practice if you adopt the printing of even Short-Notice Questions.

Mr. DEPUTY SPEAKER.—With regard to this can the Hon'ble Member point out any Rule?

Sri D.H. CHANDRASEKHARAIYA—There is no Rule; there is no prohibition even.

Mr. DEPUTY SPEAKER.—It will be considered later on. Now the question will be taken up.

The Hon'ble Sri H. C. DASAPPA.—The question has been put already.

Sri D. H. CHANDRASEKHARAIYA—It is a question of convenience to the Members. Therefore, the Chair may kindly permit the question being taken up tomorrow.